

## ಸ್ವಾಮಿ ವಿವೇಕಾನಂದರು ನಿರೂಪಿಸಿದ

# ನೀತಿಕಥೆಗಳು



ಡಾ. ಕೆ. ಅನಂತರಾಮು

## ಛಡಿಯೇಟಿನ ಶಿಕ್ಷೆ

ನಾವು ಮಾಡುವ ಕರ್ಮಗಳಿಗೆಲ್ಲ, ಅವುಗಳ ಫಲವಾಗಿ ಅನುಭವಿಸುವ ಸುಖದುಃಖಗಳಿಗೆಲ್ಲ, ನಾವೇ ಹೊಣೆಗಾರರಾಗಿದ್ದೇವೆ. ಆದರೆ ಅವರಿಂದಾಯಿತು, ಇವರಿಂದಾಯಿತು ಎಂದು ದೋಷವನ್ನು ಇನ್ನೊಬ್ಬರ ಮೇಲೆ ಕೂರಿಸಲು ಪ್ರಯತ್ನಿಸುತ್ತಿರುತ್ತೇವೆ. ಅದು ಹಾಗಲ್ಲ. ಬೆಂಕಿಯಲ್ಲಿ ಕೈಯಿಟ್ಟವರೂ ನಾವೇ; ಗಬ್ಬುನಾತದ ಹೊಲಸಿನ ಹೊಂಡವನ್ನು ನಿರ್ಮಿಸಿಕೊಂಡವರೂ ನಾವೇ. ಒಂದು ಅಚ್ಚನ್ನು ನಾವೇ ತಯಾರಿಸಿಕೊಂಡು, ಅದರೊಳಕ್ಕೆ ನಮ್ಮನ್ನು ನಾವೇ ಎರಕ ಹೊಯ್ದುಕೊಳ್ಳುತ್ತಿದ್ದೇವೆ. ಕಾರ್ಯಕ್ಕೊಂದು ಕಾರಣವಿದ್ದೇ ತೀರುತ್ತದೆ. ಅದೇ ಕಾರ್ಯಕಾರಣ ಸಂಬಂಧ.

ಒಬ್ಬ ಪುರುಷನನ್ನು ಅವನು ಸತ್ತ ಮೇಲೆ ಯಮದೂತರು ಯಮಲೋಕಕ್ಕೆ ಎಳೆದುಕೊಂಡು ಹೋದರು. ಅವನ ಪಾಪಗಳಿಗೆ ತಕ್ಕ ಶಿಕ್ಷೆ ವಿಧಿಸಬೇಕೆಂದು ಯಮಧರ್ಮರಾಯನ ಸಮ್ಮುಖದಲ್ಲಿ ನಿಲ್ಲಿಸಿದರು. ಚಿತ್ರಗುಪ್ತನು ಆ ವ್ಯಕ್ತಿಯ ಪಾಪಗಳ ಪಟ್ಟಿಯನ್ನು ಯಮನ ಮುಂದೆ ಓದಿದನು. ಆ ಪಾಪಗಳ ಪಟ್ಟಿಯಲ್ಲಿ ಅವನು ತನ್ನ ಹೆಂಡತಿಯನ್ನು ಹೊಡೆದು ಬಡಿದು ಹಿಂಸಿಸುತ್ತಿದ್ದನು ಎಂಬುದೂ ಒಂದಾಗಿತ್ತು. ಆಗ ಯಮನು, "ಇವನು ಯಾರನ್ನು ಗುರುವಾಗಿ ಮಾಡಿಕೊಂಡಿದ್ದನು?" ಎಂದು ಕೇಳಿದನು. "ಇವನು ಯಾರನ್ನೂ ಗುರುವಾಗಿ ಮಾಡಿಕೊಂಡಿರಲಿಲ್ಲ, ಮಹಾಪ್ರಭು" ಎಂದು ಚಿತ್ರಗುಪ್ತನು ಉತ್ತರಿಸಿದನು. "ಹೆಂಡತಿಯನ್ನು ಹಿಂಸಿಸುತ್ತಿದ್ದ ತಪ್ಪಿಗಾಗಿ ಈತನಿಗೆ ಮೂವತ್ತು ಛಡಿಯೇಟುಗಳನ್ನು ಕೊಡಿ. ಮಿಕ್ಕ ಪಾಪಗಳಿಗೆ ತಕ್ಕ ಶಿಕ್ಷೆಯನ್ನು ಆಮೇಲೆ ವಿಚಾರಿಸೋಣ" ಎಂದು ಯಮಧರ್ಮನು ಆಜ್ಞೆ ಮಾಡಿದನು. ತರುವಾಯ ಯಮದೂತರು ಹಿಡಿದುತಂದಿದ್ದ ಮತ್ತೊಬ್ಬ ಪುರುಷನನ್ನು ವಿಚಾರಣೆಗಾಗಿ ಹಾಜರುಪಡಿಸಿದರು. ಚಿತ್ರಗುಪ್ತನು ಅವನ ಪಾಪಗಳ ಪಟ್ಟಿಯನ್ನು ಒಪ್ಪಿಸಿದನು. ಅದರಲ್ಲಿ ಅವನು ತನ್ನ ವೃದ್ಧೆಯಾದ ತಾಯಿಯನ್ನು ಅನಾದರಣೆ ಮಾಡಿ ನಿಂದಿಸುತ್ತಿದ್ದನು ಎಂಬುದು ಇತ್ತು. ಆಗ ಯಮನು "ಇವನಿಗೆ ಯಾರು ಗುರುವಾಗಿದ್ದರು?" ಎಂದು ಕೇಳಿದುದಕ್ಕೆ ಚಿತ್ರಗುಪ್ತನು "ಗುರುವೊಬ್ಬನಿದ್ದನು, ಅವನೂ ಈಗ ನಮ್ಮ ಲೋಕದಲ್ಲಿಯೇ ಇದ್ದಾನೆ" ಎಂದು ತಿಳಿಸಿದನು. "ತಾಯಿಯನ್ನು ಅಸಡ್ಡೆ ಮಾಡಿದ್ದಕ್ಕೆ ಇವನಿಗೂ ಮೂವತ್ತು ಛಡಿ ಏಟು ಕೊಡಿ, ಮಿಕ್ಕ ಪಾಪಗಳನ್ನು ಆಮೇಲೆ ವಿಚಾರಿಸೋಣ. ಆ ಛಡಿಯೇಟುಗಳಲ್ಲಿ ಹದಿನೈದನ್ನು ಮಾತ್ರ ಇವನಿಗೆ ಕೊಟ್ಟು, ಮಿಕ್ಕ ಹದಿನೈದನ್ನು ಇವನ ಗುರುವಿಗೆ ಮೀಸಲಾಗಿಡಿ" ಎಂದು ಯಮನು ಆಜ್ಞಾಪಿಸಿದನು.

ಒಂದು ಬಾರಿ ಚಲಿಸಲು ಪ್ರಾರಂಭಿಸಿದ ಕರ್ಮಚಕ್ರವು ಎಡೆಬಿಡದೆ ಸುತ್ತುತ್ತಲೇ ಇರುತ್ತದೆ. ಅದನ್ನು ನಮ್ಮಿಂದ ನಿಲ್ಲಿಸುವುದು ಸಾಧ್ಯವಿಲ್ಲ. ಈ ಕರ್ಮಬಂಧನದಿಂದ ಹೊರಬರಬೇಕಾದರೆ ಕರುಣೆಯ ಸಾಕಾರಮೂರ್ತಿಯಾದ ದೇವರನ್ನೇ ಬೇಡಿಕೊಳ್ಳಬೇಕು. ಅವನು ಕಾರ್ಯಕಾರಣ ನಿಯಮವನ್ನು ಮೀರಿದವನಾಗಿದ್ದು, ಕರ್ಮಪಾಶದಿಂದ ಬಿಡಿಸಿ ಹೊರಕ್ಕೆ ತಂದಿಕ್ಕಿಬಿಡುತ್ತಾನೆ. ನಿಯಮಗಳು ಅವನನ್ನು ನಡೆಸುವುದಿಲ್ಲ. ಬದಲಾಗಿ ಅವನ ಇಚ್ಛೆಯಂತೆ ನಿಯಮಗಳು ಚಾಲ್ತಿಯಲ್ಲಿರುತ್ತವೆ.

ಗುರುವೆನಿಸಿದವನು ಸರಿಯಾಗಿ ಮಾರ್ಗದರ್ಶನ ಮಾಡದಿದ್ದರೆ, ಶಿಷ್ಯನು ಮಾಡಿದ ತಪ್ಪಿಗೆ ಗುರುವೂ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ ಎಂಬ ಸಂಗತಿ ಮೇಲಿನ ದೃಷ್ಟಾಂತದಲ್ಲಿ ಕೂಡಿಕೊಂಡಿದೆ. ಈ ಸನ್ನಿವೇಶಕ್ಕೆ ಸ್ವಾಮಿ ವಿವೇಕಾನಂದರು, "ಧರ್ಮೋಪದೇಶ ಕೊಡುವುದರಲ್ಲಿ ದೊಡ್ಡ ಅನಾಹುತವೇ ಕಾದಿದೆ. ನಾನಂತೂ ಧರ್ಮೋಪದೇಶ ಮಾಡುತ್ತಲೇ ಲೋಕವನ್ನೆಲ್ಲ ಸಂಚರಿಸುತ್ತಿದ್ದೇನೆ. ನನಗಾಗಿ ಏನು ಕಾದಿದೆಯೋ ನಾ ಕಾಣೆ. ಲೆಕ್ಕವಿಲ್ಲದಷ್ಟು ಜನರು ನನ್ನ ಶಿಷ್ಯರಾಗಿ ನನ್ನಿಂದ ಉಪದೇಶ ಕೇಳಿದ್ದಾರೆ. ಹಾಗೆ ಉಪದೇಶ ಕೇಳಿಸಿಕೊಂಡ ಪ್ರತಿಯೊಬ್ಬ ಶಿಷ್ಯನ ಕಡೆಯಿಂದಲೂ ನನಗೆ ಹದಿನೈದು ಏಟುಗಳು ಮೀಸಲಾದರೆ, ಆ ದೇವರೇ ನನಗೆ ದಾರಿ ತೋರಿಸಬೇಕು" ಎಂದು ನಗೆಯ ಅಲೆಯನ್ನೇ ಎಬ್ಬಿಸಿದ್ದಾರೆ. *